ಕುಂತು ತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದರು. ಮಠದಲ್ಲಿ ಗಂಗಾಧರಯ್ಯಸ್ವಾಮಿಗಳ ಗದ್ದುಗೆಯ ಪೂಜೆಯನ್ನು ಮಾಡುತ್ತಿದ್ದ ಕಲ್ಲಯ್ಯಸ್ವಾಮಿ ಸಂಜೆಯ ಪೂಜೆಗೆ ಇನ್ನೂ ಬಂದಿರಲಿಲ್ಲ. ಮಠದ ಆವರಣ ಶಾಂತವಾಗಿತ್ತು. ಮಾಯಾ ಮಠದೊಳಗೆ ಹೋಗಿ ಗಂಗಾಧರಯ್ಯಸ್ವಾಮಿಗಳ ಗದ್ದುಗೆಗೆ ನಮಸ್ಕರಿಸಿ ಬಂದು, ಆಲದ ಗಿಡದ ಕೆಳಗೆ ಕುಂತಳು. ಆಕೆಯ ಮನಸ್ಸು ನಿರುಮ್ಮಳವಾಗಿತ್ತು. ಗಳಿಗತ್ತು ತಾನು ದಾಟಿ ಬಂದ ಬದುಕನ್ನು ನೆನಪಿಸಿಕೊಂಡಳು. ವಿದ್ಯಾಭ್ಯಾಸ ಮಾಡಲು ಪಂಚಯ್ಯಸ್ವಾಮಿಗಳು ಮಾಡಿದ ಉಪಕಾರವನ್ನು ಸ್ಮರಿಸಿಕೊಂಡು ಕಣ್ಣುಗಳು ತುಂಬಿ ಬಂದವು. ಹಾಗೆ ತುಂಬಿ ಬಂದ ಕಣ್ಣೀರನ್ನು ಒರೆಸಿಕೊಳ್ಳುತ್ತ ಸುತ್ತಲೂ ಕಣ್ಣಾಡಿಸಿದಳು. ಆಗ ಮಠದಿಂದ ತುಸು ದೂರದಲ್ಲಿದ್ದ ಪಂಚಯ್ಯಸ್ವಾಮಿಗಳ ವಿಶ್ರಾಂತಿ ಕೋಣೆಯಲ್ಲಿ ಬಲ್ಬು ಉರಿಯುತ್ತಿದ್ದುದು ಕಿಟಕಿಯಿಂದ ಕಾಣಿಸಿತು. ಅಷ್ಟಕ್ಕೂ ಕೋಣೆಯ ಬಾಗಿಲು ಅರೆ ತೆರೆದ ಸ್ಥಿತಿಯಲ್ಲಿ ಮುಂದು ಮಾಡಿತ್ತು. ಇದನ್ನು ಕಂಡು ವಿಶ್ರಾಂತಿ ಕೋಣೆಯಲ್ಲಿ ಪಂಚಯ್ಯಸ್ವಾಮಿಗಳು ಇರಬೇಕು ಎಂದುಕೊಂಡಳು. ಅವರು ವಿದೇಶಿ ಪ್ರವಾಸದಿಂದ ಮರಳಿ ಬಂದ ನಂತರ ಆಕೆ ಅವರನ್ನು ಕಂಡಿರಲಿಲ್ಲ. ಹೀಗಾಗಿ, ಅವರನ್ನು ಭೇಟ್ಟಿಯಾಗಬೇಕೆಂದುಕೊಂಡು ಅತ್ತ ಹೋದಳು. ಆಕೆ ಮುಂದು ಮಾಡಿದ ಬಾಗಿಲನ್ನು ತೆರೆದುಕೊಂಡು, 'ಅಪ್ಪಗೋಳ...' ಎನ್ನುತ್ತ ಒಳಗೆ ಹೋದಳು. ಆಗ ಆಕೆಯ ದನಿಯನ್ನು ಕೇಳಿ ತೂಗು ಮಂಚದ ಮೇಲೆ ಏನನ್ನೋ ಯೋಚಿಸುತ್ತ ಕುಂತಿದ್ದ ಪಂಚಯ್ಯಸ್ವಾಮಿಗಳು, 'ಹ್ಞಾಂ...' ಎನ್ನುತ್ತ ಸರಕ್ಕನೆ ವಾಸ್ತವಕ್ಕೆ ಬಂದು, 'ಬಾ, ಮಾಯಾ, ಬಾ... ಅರಾಮದಿ ಏನು?' ಎನ್ನುತ್ತ ಎದ್ದು ನಿಂತರು. ಕ್ಷಣ ಹೊತ್ತು ಆಕೆಯ ಮೇಲೇನೆ ದೃಷ್ಟಿ ನೆಟ್ಟರು. ಆಗಲೇ, ತನ್ನಾಸೆ ಪೂರೈಸುವ ಕಾಲ ಸನ್ನಿಹಿತವಾಯಿತು ಎಂದು ಮನದೊಳಗೆ ಅಂದುಕೊಂಡು ಮುದಗೊಂಡರು. ಅದೇ ಯೋಚನೆಯಲ್ಲಿ ತಮಗರಿಲ್ಲದಂಗೆಯೇ ಹೋಗಿ ಬಾಗಿಲನ್ನು ಮುಚ್ಚಿಕೊಂಡು ಬಂದು ಮಾಯಾಳ ಎದುರಿಗೆ ನಿಂತರು. ಆಕೆಗೆ ಏನೊಂದೂ ತಿಳಿಯದಾಯಿತು. ಕೋಣೆಯೊಳಗೆ ನೀರವ ಮೌನ ಮಡುಗಟ್ಟಿತ್ತು. ಆ ಹೊತ್ತಿನಲ್ಲಿ ಪಂಚಯ್ಯಸ್ವಾಮಿಗಳ ಮನಸ್ಸು ಮಾಯಾಳನ್ನು ಹೊಂದಬೇಕೆನ್ನುವ ಆಶೆಯ ದೆಸೆಯಿಂದಾಗಿ ನವೆಯುತ್ತಿತ್ತು. ಇದರಿಂದಾಗಿ, ಇನ್ನಿಲ್ಲದ ತಳಮಳದಿಂದಾಗಿ ಕ್ಷಣ ಕ್ಷಣಕ್ಕೂ ಬೆವರುತ್ತಿದ್ದರು. 'ಅಪ್ಪಗೋಳ, ಅರಾಮದೀನ್ರಿ...' ಎನ್ನುತ್ತ ಅವರ ಕಾಲಿಗೆ ನಮಸ್ಕರಿಸಿದಳು. ಆದರೆ, ಪಂಚಯ್ಯಸ್ವಾಮಿಗಳು ಅದರ ಅರಿವಿಲ್ಲದಂಗೆ ಅವಳ ಅಂದವನ್ನು ಕಣ್ತುಂಬಿಕೊಂಡು ಸುಮ್ಮನೇ ನಿಂತಿದ್ದರು. ಚೂಡಿದಾರ ತೊಟ್ಟಿದ್ದ ಮಾಯಾ ಅವರಿಗೆ ದಂತದ ಗೊಂಬೆಯಂತೆ ಕಂಡಳು. ಅರೆಕ್ಷಣ ಆಕೆಯ ಸೌಂದರ್ಯವನ್ನು ಕಂಡು ಬುದ್ಧಿಗೆ ಮಂಕು ಕವಿದಂತಾಗಿ ವಾಸ್ತವದಲ್ಲಿನ ತಮ್ಮ ಸ್ಥಾನಮಾನಗಳನ್ನೇ ಮರೆತರು. ಆ ಗಳಿಗೆಯಲ್ಲಿ ತಮ್ಮ ದೇಹಸುಖವನ್ನು ತಣಿಸಿಕೊಳ್ಳುವುದಕ್ಕಾಗಿ ಹಾತೊರೆಯುತ್ತಿದ್ದ ಅವರು ಇದ್ದಕ್ಕಿದ್ದಂಗೆ ಮಾಯಾಳನ್ನು ತಮ್ಮತ್ತ ಬರಸೆಳೆದುಕೊಂಡು ಬಿಗಿಯಾಗಿ ಅಪ್ಪಿಕೊಂಡರು. ಇದರಿಂದ ಹೌಹಾರಿದಂತಾದ ಮಾಯಾ, 'ಅಪ್ಪಗೋಳ, ಬಿಡ್ರಿ, ಬಿಡ್ರಿ... ನಿಮ್ಮ ಕಾಲು ಬೀಳ್ತೀನಿ...' ಎಂದು ಬೇಡಿಕೊಳ್ಳತೊಡಗಿದಳು. ಆದರೆ, ಪಂಚಯ್ಯಸ್ವಾಮಿಗಳ ಬಿಗಿಯಾದ ಅಪ್ಪುಗೆಯಲ್ಲಿ ಆಕೆಯ ದನಿ ಕರಗಿ ಹೋಯಿತು. ಅವರ ತೋಳ್ತೆಕ್ಕೆಯಲ್ಲಿ ಆಕೆಯ ದೇಹವೆಂಬುದು ಸುಡು ಸುಡು ಕೆಂಡದಂಗಾಯಿತು. ಇದರಿಂದಾಗಿ, ಪಂಚಯ್ಯಸ್ವಾಮಿಗಳ ಗಂಡಸುತನದ ಮುಂದೆ ಮಾಯಾಳ ಮನಸ್ಸು ಅರೆಗಳಿಗೆ ದುರ್ಬಲವಾಯಿತು. ಆಕ್ಷಣದಲ್ಲಿ ಆಕೆ ಪ್ರತಿರೋಧಿಸುವ ಬದಲಿಗೆ ಸಹಕರಿಸಿದಳು. ಇದೆಲ್ಲವೂ ಕ್ಷಣಮಾತ್ರದಲ್ಲಿ ನಡೆದು ಹೋಯಿತು. ಎಲ್ಲ ಮುಗಿದ ಮೇಲೆ ಮಾಯಾ ಮಂಚದ ಮೇಲೆ ಕುಂತು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಆಗ, 'ಮಾಯಾ, ಅಳಬ್ಯಾಡ... ನಾ ಕೈಬಿಡಂಗಿಲ್ಲ! ನಿನ್ನ ಆಸ್ರಕ್ಕ ನಾನು ಯಾವತ್ತೂ ಇರತೀನಿ. ಚಿಂತೆ ಮಾಡಬ್ಯಾಡ...' ಎಂದು ಪಂಚಯ್ಯಸ್ವಾಮಿಗಳು ಆಕೆಯನ್ನು ಸಮಾಧಾನ ಪಡಿಸಿದರು. ಆದರೆ, ಮಾಯಾ ಅವರ ಮಾತನ್ನು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಆಕೆ ಅಳುತ್ತಲೇ ವಿಶ್ರಾಂತಿ ಕೋಣೆಯಿಂದ ಹೊರಟು ಹೋದಳು. ಅಂದೇ ಕೊನೆಯಾಯಿತು. ಆನಂತರದಲ್ಲಿ ಮಾಯಾ ಅತ್ತ ಸುಳಿದಿರಲಿಲ್ಲ...

ಇದು ಪಂಚಯ್ಯಸ್ವಾಮಿಗಳ ಆತಂಕಕ್ಕೆ ಕಾರಣವಾಗಿತ್ತು. ಆದರೆ ಅದನ್ನು ಹೊರಗೆ ತೋರುಗೊಡದೆ ಏನೂ ಆಗೇ ಇಲ್ಲ ಎಂಬಂತೆ ಇದ್ದರು.